## ಬೆನ್ನೆಂದರೆ....

ಬೆನ್ನು ತೋರುವ ನಟಿಯರ ಕುರಿತು ಇನ್ನು ಟೀಕೆ ಮಾಡುವಂತಿಲ್ಲ. ಬೆನ್ನ ಹಿಂದೆ ಬೀಳುವ ಅಭಿಮಾನಿಗಳಿಗಾಗಿಯೋ ಅಥವಾ ಫ್ಯಾಷನ್‌ಗಾಗಿಯೋ ನಟಿಯರು ಬೆನ್ನು ತೆರೆದುಕೊಳ್ಳುವಂಥ ದಿರಿಸು ಧರಿಸುತ್ತಿರುವುದಲ್ಲ. ಕ್ಯಾಮೆರಾಗಳಿಗೆ ಬೆನ್ನು ತಿರುಗಿಸುತ್ತಿರುವ ನಟಿ ಅನೂಷ್ಕಾ ಶರ್ಮಾ ಅದರ ಹಿಂದಿನ ಗುಟ್ಟನ್ನು ಹೊರಹಾಕಿದ್ದಾರೆ.



ಅವರ ಪ್ರಕಾರ ತೆರೆದ ಬೆನ್ನಿನ ದಿರಿಸುಗಳು ಆತ್ಮವಿಶ್ವಾಸದ ಪ್ರತೀಕವಂತೆ! 'ಫ್ಯಾಷನ್‌ನಲ್ಲಿ ಇರಬಹುದು ಅಥವಾ ರೂಢಿಯಲ್ಲಿರುವ ಉಡುಪಿನಲ್ಲಿರ-ಬಹುದು, ತೆರೆದ ಬೆನ್ನು ಯಾವಾಗಲೂ ಆತ್ಮವಿಶ್ವಾಸವನ್ನು ಸಂಕೇತಿಸುತ್ತದೆ' ಎಂದಿದ್ದಾರೆ ಅನೂಷ್ಕಾ. ಅವರ ಪಾಲಿಗೆ ಆತ್ಮವಿಶ್ವಾಸ ಮತ್ತು ತೆರೆದ ಬೆನ್ನು ಎರಡಕ್ಕೂ ಒಂದೇ ಅರ್ಥವಂತೆ. ಹೀಗಾಗಿಯೇ ಅಂಥ ಉಡುಪುಗಳ ಮೇಲೆ ಅವರಿಗೆ ಹೆಚ್ಚು ಪ್ರೀತಿಯಂತೆ.

## ಜಾಕ್ವೆಲಿನ್- ಸಾಜಿದ್ ವಿರಸ

ನಟಿ ಜಾಕ್ವೆಲಿನ್ ಫರ್ನಾಂಡಿಸ್ ಮತ್ತು ನಿರ್ಮಾಪಕ ಸಾಜಿದ್ ಖಾನ್ ನಡುವಿನ ಮೂರು ವರ್ಷದ ಪ್ರೇಮ ಸಲ್ಲಾಪಕ್ಕೆ ಅಂತ್ಯ ಬಿದ್ದಿದೆ. 'ಹೌಸ್‌ಫುಲ್ 2' ಚಿತ್ರೀಕರಣದ ವೇಳೆ ಇಬ್ಬರ ನಡುವೆ ಸಲಿಗೆ ಬೆಳೆದಿತ್ತು. ಬಳಿಕ ಮೂರು ವರ್ಷ ಡೇಟಿಂಗ್‌ನಲ್ಲಿ ಮಗ್ನವಾಗಿದ್ದ ಈ ಜೋಡಿ ನಡುವೆ ಫೆಬ್ರುವರಿಯಲ್ಲಿಯೇ ವಿರಸ ಮೂಡಿತ್ತು. ಆಗಿನಿಂದಲೇ ದೂರವಾಗಲು ಮನಸ್ಸು ಮಾಡುತ್ತಿದ್ದರೂ ಹಿತೈಷಿಗಳು ಇಬ್ಬರ ನಡುವೆ ತೇಪೆ ಹಚ್ಚುವ ಪ್ರಯತ್ನ ನಡೆಸಿದ್ದರು. ಆದರೆ ಇದಾವುದೂ ಫಲಿಸಲಿಲ್ಲ. ಇಬ್ಬರೂ ಪರಸ್ಪರ ಹೊಂದಾಣಿಕೆ ಮಾಡಿಕೊಳ್ಳಲು ಸಾಧ್ಯವಾಗುತ್ತಿಲ್ಲ ಎಂಬುದು ಅರಿವಾಗಿದ್ದರಿಂದ ದೂರವಾಗಲು ನಿಶ್ಚಯ ಮಾಡಿದರಂತೆ. ಜಾಕ್ವೆಲಿನ್ ಬಗ್ಗೆ ಸಾಜಿದ್ ತುಂಬಾ ಪೊಸೆಸಿವ್ ಆಗಿದ್ದರು. ಸಾಜಿದ್ ಒಪ್ಪಲಿಲ್ಲ ಎಂಬ ಕಾರಣಕ್ಕೆ ಹೃತಿಕ್ ರೋಷನ್‌ಗೆ ಚುಂಬಿಸುವ ದೃಶ್ಯವಿದ್ದ 'ಕ್ರಿಶ್ 3'ಚಿತ್ರದಿಂದ ಜಾಕ್ವೆಲಿನ್ ಹೊರಬಂದಿದ್ದರು. ಬಿಕಿನಿ ಧರಿಸಬೇಕಿದ್ದರಿಂದ 'ರಾಜ್ 3' ಚಿತ್ರಕ್ಕೂ ಗುಡ್‌ಬೈ ಹೇಳಿದ್ದರು. ಮಾತ್ರವಲ್ಲ,



ಇತರ ಚಿತ್ರಗಳಲ್ಲಿಯೂ ಜಾಕ್ವೆಲಿನ್‌ರ ಉಡುಪಿನ ವಿಚಾರದಲ್ಲಿ ಸಾಜಿದ್ ಮೂಗು ತೂರಿಸುತ್ತಿದ್ದರಂತೆ. ಈಗ ಸಂಬಂಧ ಹಳಸಿರುವುದರಿಂದ ಸಾಜಿದ್ ನಿರ್ಮಾಣದ ಸೈಫ್ ಅಲಿ ಖಾನ್ ನಾಯಕರಾಗಿರುವ ಹೊಸ ಚಿತ್ರದಲ್ಲಿ ಜಾಕ್ವೆಲಿನ್ ಕಾಣಿಸಿಕೊಳ್ಳುವುದು ಅನುಮಾನ. ಇಲ್ಲಿಗೆ ಬಾಲಿವುಡ್‌ನ ಮತ್ತೊಂದು ಪ್ರೇಮಕಥೆ ನೀರಸ ಅಂತ್ಯ ಕಂಡಂತಾಗಿದೆ.

## ಕಳಚಿದ ಬೆಸುಗೆ

ಬಾಲಿವುಡ್‌ನ ನಾನೊಂದು ತೀರ– ನೀನೊಂದು ತೀರ ಎಂಬ ಮತ್ತೊಂದು ಕಥೆ ಇದು. ಜಾನ್ ಅಬ್ರಹಾಂ ಜೊತೆಗಿನ ದೀರ್ಘಕಾಲದ ಪ್ರೇಮ ಬೀಗ ಜಡಿದು ಹೊರಬಂದ ಬಿಪಾಶಾ ಬಸು, ಹರ್ಮನ್ ಬವೇಜಾ ತೆಕ್ಕೆಗೆ ಜಾರಿದ್ದರು. ಒಂದಷ್ಟು ಕಾಲ ಪಾರ್ಟಿ, ಅಲ್ಲಿ ಇಲ್ಲಿ ಸುತ್ತಾಡಿ ಗಾಸಿಪ್‌ಗಳಿಗೆ ಪುಷ್ಕಳ ಆಹಾರ ಒದಗಿಸಿದ್ದ ಈ ಜೋಡಿ ನಡುವೆ ವಿರಸ ಉಂಟಾಗಿದೆಯಂತೆ. ಇತ್ತೀಚೆಗೆ ನಡೆದ ಸಂತೋಷಕೂಟವೊಂದರಲ್ಲಿ ಇಬ್ಬರ ವರ್ತನೆ, ಆ ಅನುಮಾನದ ಹೊಗೆಯನ್ನು ದಟ್ಟವಾಗಿಸಿದೆ. 'ಏನೋ ಸಣ್ಣಪುಟ್ಟ ಜಗಳವಾಗಿತ್ತು. ಅದಕ್ಕೆ ಇಬ್ಬರೂ ಮುನಿಸಿಕೊಂಡಿದ್ದಾರೆ. ಅದು ದೊಡ್ಡದಾಗಿ ಬೆಳೆಯುವುದು ಬೇಡ ಎಂಬ ಕಾರಣಕ್ಕಷ್ಟೇ ಅಂತರ ಇಟ್ಟುಕೊಂಡಿದ್ದಾರೆ. ಸ್ವಲ್ಪ ದಿನಗಳಲ್ಲಿ ಹಳೆಯ ಹಳಿಗೆ ಮರಳುತ್ತಾರೆ' ಎಂದು ಬಿಪಾಶಾ ಸ್ನೇಹಿತೆಯೊಬ್ಬರು ಹೇಳಿದ್ದಾರೆ. ಪಾರ್ಟಿ ಮುಗಿಸಿದ ರಾತ್ರಿ ಇಬ್ಬರೂ ಒಲ್ಲದ ಮನಸ್ಸಿನಿಂದ ಒಂದೇ ಕಾರಿನಲ್ಲಿ ಹೊರಹೋದರು. ಆದರೆ ಇಬ್ಬರ ನಡುವಿನ ಬೆಸುಗೆ ಸುಲಭದ ಮಾತಲ್ಲ ಎಂಬುದು ಇಬ್ಬರನ್ನೂ ಬಲ್ಲವರ ಮಾತು.

■ ಅಮಿ


ಶ್ರೀ ಮಂತ್ರಾಲಯದ ಪ್ರಖ್ಯಾತ ಜ್ಯೋತಿಷ್ಯರು

ಗುರುಸಾರ್ವಭೌಮ ಶ್ರೀ ರಾಘವೇಂದ್ರ ಸ್ವಾಮಿಯ ಉಪಾಸಕರು, ದಕ್ಷಿಣ ಭಾರತದಾದ್ಯಂತ ಆರಾಧ್ಯದೈವವೆಂದೇ ಪ್ರಖ್ಯಾತಿ ಪಡೆದು ಶ್ರೀ ಗುರು ರಾಘವೇಂದ್ರ ಸ್ವಾಮಿಯ ಅಪಾರ ದೈವಶಕ್ತಿಯಿಂದ ಅನೇಕ ಜನರು ಸಮಸ್ಯೆಗಳ ಪರಿಹಾರಕ್ಕೆ ಕಾರಣಕರ್ತರಾದ ಪಂ. ಶ್ರೀ ಶ್ರೀ ಕೃಷ್ಣ ಶಾಸ್ತ್ರಿ ಇವರು ಬಹು ಜನತೆಯ ಒತ್ತಾಯದ ಮೇರೆಗೆ ದೇವನಹಳ್ಳಿಯಲ್ಲಿ ನೆಲಸಿದ್ದಾರೆ, ಹಸ್ತ, ಜಾತಕ, ಭಾವಚಿತ್ರ, ಮುಖಲಕ್ಷಣ ನೋಡಿ ನಿಖರವಾಗಿ ನಿಮ್ಮ ಭವಿಷ್ಯವನ್ನು ಹೇಳುತ್ತಾರೆ. ಸತಿಪತಿ ಕಲಹ, ಆರೋಗ್ಯ, ಮದುವೆ, ಸಂತಾನ, ವಶೀಕರಣ, ಪ್ರೇಮವಿಚಾರ, ಕೋರ್ಟ್‌ಕೇಸ್, ವಿದೇಶ ಪ್ರಯಾಣ, ಲೈಂಗಿಕ, ಪ್ರಾಣಭಯ, ಶತ್ರುಪೀಡೆ, ಎಷ್ಟೇ ಸಂಪತ್ತಿದ್ದರೂ ಮನಶಾಂತಿಯ ಕೊರತೆ, ಮಾಟ-ಮಂತ್ರ, ದುಷ್ಟಶಕ್ತಿ ಪೀಡೆ ಇನ್ನೂ ನಿಮ್ಮ ಜೀವನದ ಯಾವುದೇ ಕಠಿಣ ಸಮಸ್ಯೆಗಳಿದ್ದರೂ ಪರಿಹಾರ ಶತಃಸಿದ್ಧ.

ಇಲ್ಲಿಯವರೆಗೆ ತಾವು ಎಷ್ಟೋ ದೈವ, ದೇವರು ಪಂಡಿತರಲ್ಲಿ ಪರಿಹಾರ ಕಾಣದೆ ನಂಬಿಕೆ ಕಳೆದುಕೊಂಡು ಜೀವನದಲ್ಲಿ ಜಿಗುಪ್ಸೆ ಹೊಂದಿದ್ದರೆ ಅಂತಹ ಯಾವುದೇ ಕಠಿಣ ಸಮಸ್ಯೆಗಳಿಗೂ ಶ್ರೀ ರಾಘವೇಂದ್ರ ಸ್ವಾಮಿಯ ಪೂಜಾ ಆರಾಧನೆಯಿಂದ ಮತ್ತು ದೈವಶಕ್ತಿಯಿಂದ ಹಾಗೂ ದಕ್ಷಿಣ ಕನ್ನಡದ ಶಾಸ್ತ್ರೋಕ್ತ ಪದ್ಧತಿಯಿಂದ ಕೇವಲ 9ದಿನಗಳಲ್ಲಿ 100% ಶಾಶ್ವತ ಪರಿಹಾರ ಖಂಡಿತ.

ದೂರದ ಊರಿನವರಿಗೂ ದೂರವಾಣಿಯ ಮುಖಾಂತರ ಸಲಹೆ ಹಾಗೂ ಪರಿಹಾರ ತಿಳಿಸಲಾಗುವುದು.

ಖಾಯಂ ವಿಳಾಸ: ಎಚ್.ಡಿ.ಎಫ್.ಸಿ ಬ್ಯಾಂಕ್ ಹಿಂಭಾಗ, ಬಿ.ಬಿ ರೋಡ್, ಮರಳುಬಾಗಿಲು ರಸ್ತೆ, (ಇಂಟರ್‌ನ್ಯಾಷನಲ್ ಏರ್‌ಪೋರ್ಟ್) ದೇವನಹಳ್ಳಿ 9845637135

